## ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ., ನ್ಯಾಯಾಲಯ, ಕೊಡಗು-ಮಡಿಕೇರಿ

## ಎಂ.ವಿ.ಸಿ ಸಂಖ್ಯೆ 75/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಶೇಕಬ್ಬ ಎನ್.ಪಿ** | **PW -1** |
| ತಂದೆಯ ಹೆಸರು | : | **ಅಬ್ದುಲ್ ರೆಹಮಾನ್** | |
| ವಯಸ್ಸು | : | **70 ವರ್ಷ** | |
| ವೃತ್ತಿ | : | **ಕೆಲಸ ಇಲ್ಲ** | |
| ವಾಸ | : | **ಮಡಿಕೇರಿ** | |

**ಸಾಕ್ಷಿಯನ್ನು ದಿನಾಂಕ 23-09-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು- 2 ನೇ ಎದುರುದಾರರ ಪರ ವಕೀಲರಾದ ಶ್ರೀ ಪಿ.ಟಿ.ಜಿ ರವರಿಂದಃ**

1. ನಾನು ಅಪಘಾತವನ್ನು ನೋಡಿರುವುದಿಲ್ಲ. ನಾನು ಅಪಘಾತವಾದ ಸ್ಥಳವನ್ನು ನೋಡಿರುವುದಿಲ್ಲ. ಅಪಘಾತವು ನನ್ನ ಮಗನ ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನನ್ನ ಮಗನು ಬೈಕಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದರು ಎಂದು ಅಪಘಾತ ಸ್ಥಳದ ಅಕ್ಕಪಕ್ಕದವರು ಹೇಳಿರುತ್ತಾರೆ ಎಂದು ಹೇಳುತ್ತಾರೆ. ಪೊಲೀಸರು ದೋಷಾರೋಪಣೆ ನನ್ನ ಮಗನ ಮೇಲೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗನು ಯಾವ ದ್ವಿಚಕ್ರ ವಾಹನದಲ್ಲಿ ಸವಾರಿ ಮಾಡುತ್ತಿದ್ದನು ಎಂದು ಸದರಿ ದ್ವಿ ಚಕ್ರವಾಹನದ ನಂಬರ್ ನನಗೆ ನೆನಪಿಲ್ಲ. ಇನ್ನೊಂದು ವಾಹನದ ಸಂಖ್ಯೆ ಕೂಡ ನನಗೆ ನೆನಪಿಲ್ಲ. ವಾಹನ ಸಂಖ್ಯೆ ಕೆಎ-12-ಜೆ-4761 ದ್ವಿ ಚಕ್ರ ವಾಹನದ ಸವಾರನದು ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ನನ್ನ ಮಗನು ಓಡಿಸುತ್ತಿದ್ದ ದ್ವಿ ಚಕ್ರ ವಾಹನವನ್ನು ರಸ್ತೆಯ ಬಲಬದಿಗೆ ತೆಗೆದುಕೊಂಡಿದ್ದರಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಮಗನು ತನ್ನ ವಾಹನವನ್ನು ರಸ್ತೆಯ ಮಧ್ಯೆ ಭಾಗದಿಂದ ಬಲಬದಿಗೆ ಬಂದದರಿಂದ ಅಪಘಾತ ಆಗಿದೆ ಎಂದರೆ ಸುಳ್ಳು. ನನ್ನ ಮಗನ ತಪ್ಪಿನಿಂದಲೇ ಅಪಘಾತ ಆಗಿದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯರು ಅಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ತಿಂಗಳಿಗೆ 40,000/- ರೂ ಸಂಬಳ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ವೇತನ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ ಇದೆ. ಸಾಕ್ಷಿ ನನಗೆ ಸೌದಿ ಅರೇಬಿಯಕ್ಕೆ ಹೋಗಿ ಬರಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಪರಿಹಾರಕ್ಕೊಸ್ಕರ ಸುಳ್ಳು ಕೇಸು

ಹಾಕಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆದುಕೊಳ್ಳಲು ನನಗೆ ಅರ್ಹತೆ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲು- 1 ನೇ ಮತ್ತು 3 ನೇ ಎದುರುದಾರರ ಪರ ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುತ್ತೇನೆ.

**ಪಾಟೀಸವಾಲು- 4 ನೇ ಎದುರುದಾರರ ಪರ ವಕೀಲರಿಂದಃ**

ಎದುರುದಾರ 4 ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ.ಸರಿ ಇದೆ

ಸಹಿ/-
ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಧೀಶರು,
ಕೊಡಗು-ಮಡಿಕೇರಿ.